**ಓ.ಎಸ್.:26/2018**

**ಪಿ. ಡಬ್ಲ್ಯೂ:1**

ದಿನಾಂಕಃ 14-10-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1** ನೇ ಪ್ರತಿವಾದಿ ಪರ ವಕೀಲರಾದ **ಶ್ರೀ. ಎಮ್.ಬಿ.ಹೆಚ್. ರವರಿಂದ**

ನಾನು ಘಟಪ್ರಭಾದಲ್ಲಿ ಈಗ 5 ವರ್ಷಗಳಿಂದ ವಾಸವಿರುತ್ತೇನೆ. ಘಟಪ್ರಭಾಕ್ಕೆ ಮಲ್ಲಾಪೂರ ಪಿ ಜಿ ಎಂದು ಸಹ ಕರೆಯುತ್ತಾರೆ ಅಂದರೆ ಸರಿ. ಭೀಮಶೆಪ್ಪನಿಗೆ ಯಲ್ಲವ್ವ ಎಂಬ ಹೆಂಡತಿ ಇದ್ದಳು ಅಂದರೆ ಗೊತ್ತಿಲ್ಲ. ಭೀಮಶೆಪ್ಪ ಮತ್ತು ಯಲ್ಲವ್ವಳಿಗೆ ಮಕ್ಕಳು ಇರಲಿಲ್ಲ ಅಂದರೆ ಸರಿ. ಭೀಮಶೆಪ್ಪ ಮತ್ತು ಯಲ್ಲವ್ವ ಮರಣ ಹೊಂದಿರುತ್ತಾರೆ ಅಂದರೆ ಸರಿ. ನನ್ನ ರೇಷನ್ ಕಾರ್ಡ, ಆಧಾರ ಕಾರ್ಡ, ಚುನಾವಣಾ ಗುರುತಿನ ಚೀಟಿ ಮಲ್ಲಾಪೂರ ಪಿ ಜಿ ವಿಳಾಸಕ್ಕೆ ಇರುತ್ತವೆ ಅಂದರೆ ಸರಿ. ನಾವು ಯಾವ ಊರಿನಲ್ಲಿ ಬಹಳ ವರ್ಷ ವಾಸ ಇರುತ್ತೇವೋ ಆ ಊರಿನ ವಿಳಾಸಕ್ಕೆ ರೇಷನ್ ಕಾರ್ಡ, ಆಧಾರ ಕಾರ್ಡ, ಚುನಾವಣಾ ಗುರುತಿನ ಚೀಟಿ ನೀಡುತ್ತಾರೆ ಅಂದರೆ ಸರಿ. ನನಗೆ ಮಲ್ಲಾಪೂರ ಪಿಜಿ ಗೆ ರಹವಾಸಿ ಕೊಡುತ್ತಾರೆ ಅಂದರೆ ಸರಿ. 1 ನೇ ಪ್ರತಿವಾದಿ ಗೊಡಚಿನ ಮಲ್ಕಿಯಲ್ಲಿ ವಾಸ ಇರುತ್ತಾನೆ ಅಂದರೆ ಸರಿ. 1 ನೇ ಪ್ರತಿವಾದಿಯ ರೇಷನ್ ಕಾರ್ಡ, ಆಧಾರ ಕಾರ್ಡ, ಚುನಾವಣಾ ಗುರುತಿನ ಚೀಟಿ ಗೊಡಚಿನಮಲ್ಕಿ ವಿಳಾಸಕ್ಕೆ ಇರುತ್ತವೆ ಅಂದರೆ ಸರಿ. ರೇಷನ್ ಕಾರ್ಡನಲ್ಲಿ ಕುಟುಂಬದ ಎಲ್ಲಾ ಸದಸ್ಯರ ಹೆಸರುಗಳು ಇರುತ್ತವೆ ಅಂದರೆ ಸರಿ. 1 ನೇ ಪ್ರತಿವಾದಿಯ ಪಡಿತರ ಚೀಟಿಯಲ್ಲಿ ಆತನ ಒಬ್ಬನ ಹೆಸರು ಮಾತ್ರ ಇರುತ್ತದೆ ಅಂದರೆ ಸರಿ. ನನ್ನ ತಾಯಿ ಮಲ್ಲಾಪೂರ ಪಿಜಿಯಲ್ಲಿಯೇ ಇರುತ್ತಾರೆ ಅಂದರೆ ಸರಿ. ನನ್ನ ತಾಯಿ ಮಲ್ಲಾಪೂರ ಪಿಜಿ ಯಲ್ಲಿ 20-25 ವರ್ಷಗಳಿಂದ ಇರುತ್ತಾರೆ ಅಂದರೆ ಸರಿಯಲ್ಲ ಸಾಕ್ಷಿ ಸ್ವತಃ ಹೇಳುವುದೆಂದರೆ 5 ವರ್ಷಗಳಿಂದ ಇರುತ್ತಾರೆ.

**ಮುಂದುವರೆದ ಪಾಟೀ ಸವಾಲುಃ** ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು ಗೋಕಾಕ.

ಸಾಕ್ಷಿಯ ಸಹಿ